ದಿನಾಂಕ 18-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯವರ ಪರವಾಗಿ ಶ್ರೀ ವಿ.ಎಂ.ಎಸ್.ಯು. ವಕೀಲರವರಿಂದಃ**

ನಾನು ಈಗ ಬೆಂಗಳೂರಿನಲ್ಲಿ ವಾಸ ಮಾಡುತ್ತೇನೆ. ನಾನು ಬೆಂಗಳೂರಿನಲ್ಲಿ 1997 ರಿಂದ ವಾಸ ಮಾಡುತ್ತಿದ್ದೇನೆ. ನಾನು ಒಂದು ಐಟಿ ಕಂಪೆನಿಯಲ್ಲಿ ನೌಕರನಾಗಿರುತ್ತೇನೆ. ಸದ್ರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನನ್ನು ಹೊರತುಪಡಿಸಿ ನನ್ನ ಸಹೋದರ ಮತ್ತು ತಾಯಿಗೆ ಹೆಚ್ಚಿ ನ ಮಾಹಿತಿ ಇರುತ್ತದೆ. ನನ್ನನ್ನು ಹೊರತುಪಡಿಸಿ ನನ್ನ ಸಹೋದರನನ್ನು ಸಾಕ್ಷಿ ಮಾಡುತ್ತೇನೆ, ನನ್ನ ತಾಯಿಯವರನ್ನು ಮಾಡಲು ಬರುವುದಿಲ್ಲ ಏಕೆಂದರೆ ಅವರಿಗೆ ಹುಷಾರಿಲ್ಲ. ಸದ್ರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನನ್ನನ್ನು, ನನ್ನ ಸಹೋದರ ಮತ್ತು ತಾಯಿಯವರನ್ನು ಹೊರತುಪಡಿಸಿ ನನ್ನ ಸಂಬಂಧಿಕರಿಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುತ್ತದೆ. ಸದ್ರಿ ದಾವೆ ಹಾಕಿದ ವಿಷಯ ನನ್ನ ಸಂಬಂಧಿಕರಿಗೆ ಮಾಹಿತಿ ಇರುತ್ತದೆ. ನನ್ನ ಬಳಿ ಸದ್ರಿ ದಾವೆಯ ಬಗ್ಗೆ ಸಾಕ್ಷ ನುಡಿಯಲು ಬರುತ್ತೇವೆಂದು ಸಧ್ಯಕ್ಕೆ ಹೇಳಲು ಬರುವುದಿಲ್ಲ. ಸಧ್ಯಕ್ಕೆ ಅದರ ಅಗತ್ಯವಿರುವುದಿಲ್ಲ, ಅದಕ್ಕಾಗಿ ನನಗೆ ಹೇಳಲಿಕ್ಕೆ ಬರುವುದಿಲ್ಲ. ಸದ್ರಿ ದಾವಾ ಆಸ್ತಿಯನ್ನು ಮೂಲತಃ ನಮ್ಮ ಹಿರಿಯರವರಿಂದ ಜಾಗವನ್ನು ಶೀನಪ್ಪ ಹೆಗ್ಡೆಯವರಿಂದ ಖರೀದಿ ಮಾಡಿರುತ್ತೇನೆಂದು ಹೇಳಿರುತ್ತೇನೆಂದರೆ ಸರಿ. ಸದ್ರಿ ದಾವಾ ಆಸ್ತಿಯನ್ನು ಶೀನಪ್ಪ ಹೆಗ್ಡೆಯವರಿಂದ ಖರೀದಿ ಮಾಡಿದ್ದು ಎಂದು ತೋರಿಸಲು ನಾನು ನ್ಯಾಯಾಲಯದ ಮುಂದೆ ಕ್ರಯಪತ್ರವನ್ನು ಹಾಕಿರುತ್ತೇನೆ. ಶೀನಪ್ಪ ಹೆಗ್ಡೆಯವರಿಗೆ ಸದ್ರಿ ಆಸ್ತಿಯನ್ನು ಮಾರಾಟ ಮಾಡಲು ಅವರಿಗೆ ಹಕ್ಕಿತ್ತೆಂದು ತೋರಿಸಲು ಈ ಹಂತದಲ್ಲಿ ನನ್ನ ಬಳಿ ದಾಖಲೆಗಳಿಲ್ಲ. ಶೀನಪ್ಪ ಹೆಗ್ಡೆಯವರಿಗೆ ಸದ್ರಿ ಆಸ್ತಿಯನ್ನು ಮಾರಾಟ ಮಾಡಲು ಅವರಿಗೆ ಹಕ್ಕಿತ್ತಾ ಅಥವಾ ಇಲ್ಲವಾ ಎಂದು ನನಗೆ ಹೇಳಲು ಬರುವುದಿಲ್ಲ. ಶೀನಪ್ಪ

ಹೆಗ್ಡೆಯವರಿಗೆ ಸದ್ರಿ ಆಸ್ತಿಯನ್ನು ಮಾರಾಟ ಮಾಡಲು ಅಥವಾ ಮೂಲಗೇಣಿಗೆ ನೀಡಲು ಯಾವುದೇ ಅಧಿಕಾರವಿರುವುದಿಲ್ಲವೆಂದರೆ ನನಗೆ ಗೊತ್ತಿಲ್ಲ. ಈ ದಾವಾ ಆಸ್ತಿಗಳಲ್ಲಿ ನನಗೆ ಹಕ್ಕಿದೆಂದು ಯಾವ ದಾಖಲೆಗಳ ಆಧಾರದ ಮೇಲೆ ಹಕ್ಕನ್ನು ಕೇಳುತ್ತಿದ್ದೀರಿ ಎಂದರೆ ಸಾಕ್ಷಿದಾರರು 1989 ರ ಪಾರ್ಟಿಷಿಯನ್ ಡೀಡ್ ಮತ್ತು ಹಿಂದಿನ ಕ್ರಯ ಪತ್ರಗಳ ಆಧಾರದ ಮೇಲೆ ನಾನು ಹಕ್ಕನ್ನು ಕೇಳುತ್ತಿದ್ದೇನೆ. 1989 ರ ಪಾಲುಪಟ್ಟಿಯಾನುಸಾರವಾಗಿ ನನ್ನ ತಂದೆಯವರ ಹೆಸರಿಗೆ ಪಹಣಿ ಪತ್ರಿಕೆಯಾಗಿರುವುದಿಲ್ಲವೆಂದರೆ ಸರಿ. ದಾವಾ ಆಸ್ತಿಯ 1989 ರ ಪಾರ್ಟಿಷಿಯನ್ ಡೀಡ್ ಪ್ರಕಾರ ಕಂದಾಯ ಅಧಿಕಾರಿಗಳು ನನ್ನ ತಂದೆಯವರ ಹೆಸರಿನಲ್ಲಿ ಮ್ಯುಟೇಷನ್ ಮಾಡುವ ಅರ್ಜಿಯನ್ನು ತಿರಸ್ಕಾರ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆಯವರ ಹೆಸರಿಗೆ 1989 ರ ಪಾಲುಪಟ್ಟಿಯಾನುಸಾರವಾಗಿ ಪಹಣಿ ಪತ್ರಿಕೆಗಳಲ್ಲಿ ಅವರ ಹೆಸರು ನಮೂದಾಗಿಲ್ಲವೆಂದು ಮಾಹಿತಿ ಇತ್ತೆಂದರೆ ಸರಿ. ನನ್ನ ತಂದೆಯವರ ಜೀವಿತಾವಧಿಯಲ್ಲಿ ಪಹಣಿ ಪತ್ರಿಕೆಯಾಗಿಲ್ಲವೆಂಬ ವಿಷಯವನ್ನು ಯಾವುದೇ ಕಂದಾಯ ಅಧಿಕಾರಿಗಳ ಬಳಿ ಪ್ರಶ್ನಿಸಿರುವುದಿಲ್ಲವೆಂದರೆ ಸಾಕ್ಷಿದಾರರು ನನ್ನ ತಂದೆಯವರು ಪಹಣಿ ಪತ್ರಿಕೆಗಳಲ್ಲಿ ಅವರ ಹೆಸರಿಗೆ ಮ್ಯುಟೇಷನ್ ಮಾಡಲು ಅರ್ಜಿಯೇ ನೀಡಿಲ್ಲವೆಂದು ನುಡಿಯುತ್ತಾರೆ. ನನ್ನ ತಂದೆಯವರು ದಾವಾ ಆಸ್ತಿ ಅವರ ಹೆಸರಿಗೆ 1989 ರ ಪಾಲುಪಟ್ಟಿಯಾನುಸಾರವಾಗಿ ಅವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿಯನ್ನು ಹಾಕಿದ್ದರು, ಅದು ದಾವಾ ಆಸ್ತಿಗಳ ಬಗ್ಗೆ ತಿರಸ್ಕಾರವಾಗಿದೆ, ಸದ್ರಿ ಮಾಹಿತಿ ನನ್ನ ತಂದೆಗೆ ಗೊತ್ತಿತ್ತು, ಸದ್ರಿ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಯರಾಗಲೀ ಅಥವಾ ನಮ್ಮ ಕುಟುಂಬದವರಾಗಲೀ ದಾವಾ ಆಸ್ತಿಯಲ್ಲಿ ಎಂದೂ ಸ್ವಾಧೀನವಿರಲಿಲ್ಲ ಅದಕ್ಕಾಗಿ ಮ್ಯುಟೇಷನ್ ಅರ್ಜಿ ವಜಾ ಆಗಿತ್ತು, ಅದು ಈ ಕಾರಣಕ್ಕಾಗಿಯೇ ಪ್ರಶ್ನಿಸಿರುವುದಿಲ್ಲವೆಂದರೆ ಸರಿಯಲ್ಲ. ಕೈತಪ್ಪಿ ನಿಂದ ಮತ್ತು ನಜರ್

ಚುಕ್ಕಿನಿಂದ ದಾವಾ ಆಸ್ತಿಯ ಸರ್ವೆ ನಂಬರ್ ಗಳು ದಾಖಲೆಯಲ್ಲಿ ಏಕಾ ಏಕಿಯಾಗಿ ಯಾವುದೇ ಕಾರಣವಿಲ್ಲದೇ ಬಂದಿರುತ್ತದೆಂದರೆ ಸರಿಯಲ್ಲ. ನಾನು ನನ್ನ ಹಿರಿಯರಿಂದ ಯಾವುದೇ ಆಸ್ತಿಯಲ್ಲಿ ಯಾವುದೇ ಹಕ್ಕನ್ನು ಪಡೆದುಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ಸಾಕ್ಷಿಯವರಿಗೆ ಅವರು ಹಾಕಿದ ಎಲ್ಲಾ ದಾಖಲೆಗಳನ್ನು ತೋರಿಸಲಾಗಿರುತ್ತದೆ, ಅದರಲ್ಲಿ ನಿಪಿ.5 ರ ಅನುಸಾರವಾಗಿ ಶೀನಪ್ಪ ಹೆಗ್ಡೆಯವರಿಂದ ನಮ್ಮ ಹಿರಿಯವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ದಾವಾ ಆಸ್ತಿಯಲ್ಲಿ ಮನೆಯನ್ನು 1980 ರಲ್ಲಿ ಕಟ್ಟಿರುತ್ತಾರೆ. ಸದ್ರಿ ಮನೆಯನ್ನು ನನ್ನ ತಂದೆಯವರು ಕಟ್ಟಿರುತ್ತಾರೆ. ನನ್ನ ತಂದೆಯ ಕುಟುಂಬದವರು ಸದ್ರಿ ಮನೆಯಲ್ಲಿ ವಾಸ ಮಾಡುತ್ತಿದ್ದರು. ಸದ್ರಿ ಮನೆಯ ಬಾಗಿಲ ಸಂಖ್ಯೆ 6-50. ಸದ್ರಿ ಮನೆಯನ್ನು ದಾವಾ ಆಸ್ತಿಯ ಸರ್ವೆ ನಂಬರ್ ನಲ್ಲಿ ಕಟ್ಟಿದ್ದೆಂದು ತೋರಿಸಲು ಏನಾದರೂ ಆಧಾರವಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅನುಮತಿ ಪತ್ರ, ಅಪ್ರುವಲ್ ಮತ್ತು ತೆರಿಗೆ ಕಟ್ಟಿದ ರಶೀದಿಗಳು ಇರುತ್ತವೆ. ದಾವಾ ಆಸ್ತಿಯಲ್ಲಿ ನನ್ನ ತಂದೆಯವರು ಕಟ್ಟಿದ ಯಾವುದೇ ಮನೆ ಇರಲಿಲ್ಲವೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಮೂಲಗೇಣಿ ಹಕ್ಕಿದೆಂದು ಸಾಧನೆ ಮಾಡುತ್ತಿದ್ದೇನೆಂದರೆ ಸರಿ. ದಾವಾ ಆಸ್ತಿಗಳ ಮೂಲಧಾರರು ಯಾರೆಂದರೆ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಗಳ ಮೂಲಧಾರರು ಯಾರೆಂದು ನನ್ನ ಸಂಬಂಧಿಕರಿಗೆ ಅಥವಾ ನನ್ನ ಪರಿಚಯಸ್ಥರಿಗೆ ಗೊತ್ತಿದೆಯಾ ಎಂದರೆ ಗೊತ್ತಿರುವುದಿಲ್ಲ. ವಾರ್ಷಿಕ ಬಾಡಿಗೆ ಹಣ ಎಷ್ಟು ಇತ್ತೆಂದು ನನಗೆ ಮಾಹಿತಿ ಇರುವುದಿಲ್ಲ. ನಾನು, ನನ್ನ ತಂದೆ, ನಮ್ಮ ಪೂರ್ವಿಕರು ಮೂಲಗೇಣಿ ಕೊಟ್ಟ ಬಗ್ಗೆ ಮಾಹಿತಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವು ಕೊಟ್ಟಂತಹ ದಾಖಲೆಗಳಲ್ಲಿ ಮಾಹಿತಿಗಳಿರಬಹುದೆಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಬಗ್ಗೆ ಮೂಲಗೇಣಿ ಪಾವತಿ ಮಾಡಿದ ಬಗ್ಗೆ ನನಗೆ ಅಥವಾ ನಮ್ಮ ಹಿರಿಯರ ಬಳಿ ಯಾವುದೇ ಪಾವತಿ

ರಶೀದಿ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾವು ಕೊಟ್ಟಂತಹ ದಾಖಲೆಗಳಲ್ಲಿ ಮಾಹಿತಿಗಳಿರಬಹುದೆಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.